# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಿ.ವಿ.ರಾಮನ್‌ನಗರ ಉಪ ವಿಭಾಗ, ವಾರ್ಡ್ ಸಂಖ್ಯೆ:57, ಸಿ.ವಿ.ರಾಮನ್‌ನಗರ

## ವಾರ್ಡ್ ಸಮಿತಿ ಸಭೆ, ದಿನಾಂಕ:02-01-2021 ರ ಸಭಾ ನಡವಳಿಗಳು

ದಿನಾಂಕ:02-01-2021 ರಂದು ಬೆಳಗ್ಗೆ 10.00 ಗಂಟೆಗೆ ವಾರ್ಡ್-57 ಸಿ.ವಿ.ರಾಮನ್‌ನಗರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸುದ್ದಗುಂಟೆ ಪಾಳ್ಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರುಗಳು**

| ಕ್ರಮ ಸಂ | ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರುಗಳು | ಪ್ರವರ್ಗ |
|---|---|---|
| 1 | ಶ್ರೀ.ರಂದೀಪ್.ಡಿ ಭಾ.ಆ.ಸೇ ವಿಶೇಷ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ) | ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿರವರು |
| 2 | ಶ್ರೀ.ಸತ್ಯನಾರಾಯಣ, | ಸದಸ್ಯರು |
| 3 | ಶ್ರೀಮತಿ ಡಾ॥ ಸಿಂಧು ಶ್ರೀಕುಮಾರ್, | ಸದಸ್ಯರು |
| 4 | ಶ್ರೀ.ಚಂದ್ರಹಾಸ, | ಸದಸ್ಯರು |
| 5 | ಶ್ರೀಮತಿ.ವೆಂಕಟಲಕ್ಷ್ಮಿ | ಸದಸ್ಯರು |
| 6 | ಶ್ರೀ.ಗುಣಶೇಖರ್ | ಸದಸ್ಯರು |

ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ಸಿಬ್ಬಂಧಿಗಳು

1) ಶ್ರೀಮತಿ.ಮೀನಾಕ್ಷಿ, ಕಿರಿಯ/ಹಿರಿಯ ಆರೋಗ್ಯ ಪರಿವೀಕ್ಷಕರು
2) ಕುಮಾರಿ.ಸಹನ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
3) ಶ್ರೀ.ನಾಗರಾಜ್, ಟ್ರಾಫಿಕ್ ಪೋಲೀಸ್
4) ಶ್ರೀ.ಶೇಷಗಿರಿ, ಕಂದಾಯ ಪರಿವೀಕ್ಷಕರು,
5) ಶ್ರೀ.ಶ್ರೀನಿವಾಸ್, ಕಂದಾಯ ವಸೂಲಿಗಾರರು

ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳನ್ನು ಕಮಿಟಿಯ ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವುದಕ್ಕೆ ಸ್ವಾಗತ ಕೋರಿದರು. ಸಭೆಯನ್ನು ಮುಂದುವರೆಸಲು ಸೂಚನೆ ನೀಡಿದ ನಂತರ, ಸಭೆಯನ್ನು ಆರಂಭಿಸಲಾಯಿತು.

ಹಿಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳು:-

| ಕ್ರ. ಸಂ | ಮಾಹಿತಿ | ಕ್ರಮ ವಹಿಸಬೇಕಾಗಿರುವ ಅಧಿಕಾರಿ | ಕೈಗೊಂಡ ಕ್ರಮ |
|---|---|---|---|
| I | **BBMP** | | |
| | **ಘನತ್ಯಾಜ್ಯ ನಿರ್ವಹಣೆ (SWM)** | | |
| 1 | ಮಲ್ಲೇಶ್‌ಪಾಳ್ಯ ಮುಖ್ಯರಸ್ತೆಯಲ್ಲಿ 12 ಚಿಕ್ಕ ಬ್ಲಾಕ್‌ಸ್ಪಾಟ್‌ಗಳಿದ್ದು ಇವುಗಳನ್ನು ತೆರವುಗೊಳಿಸಲು ಕೋರಲಾಯಿತು. | **Junior Health Inspector** | ಪ್ರಗತಿಯಲ್ಲಿದೆ. |
| 2 | ಕಸ ಸಂಗ್ರಹಣೆ ವಾಹನಗಳಿಗೆ ಮೈಕ್‌ನ್ನು ಅಳವಡಿಸಲು ಸೂಚಿಸಲಾಯಿತು. | **Junior Health Inspector** | **Pending** |

Nbgd

RLp
ವಿಶೇಷ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ)ಬಿಬಿಎಂಪಿ
ಹಾಗೂ ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ- 57 ಸಿ.ವಿ ರಾಮನ್‌ನಗರ

Scanned with CamScanner

| | | | |
|---|---|---|---|
| | ಕಿರಿಯ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯ ಸಂಗ್ರಹಣೆ ಕುರಿತು ಮಾಹಿತಿ ನೀಡಿದರು. | Junior Health Inspector | Pending |
| 4 | ಕಸ ವಿಂಗಡಣೆಯ ಕುರಿತು ಸಾರ್ವಜನಿಕರಿಗೆ ಮಾರ್ಷಲ್‌ಗಳ ಪೆಟ್ರೋಲ್ ವಾಹನದ ಮುಖಾಂತರ ಜಾಗೃತಿ ಮೂಡಿಸಲು ಸೂಚಿಸಲಾಯಿತು. | Junior Health Inspector | Pending |
| 5 | ಬಾಲಾಜಿ ಬಡಾವಣೆಯ 19ನೇ ಅಡ್ಡರಸ್ತೆ ತಿರುವಿನಲ್ಲಿ ಚಿಕ್ಕದೊಂದು ಮಳಿಗೆ ಇದ್ದು, ಇಲ್ಲಿ ತುಂಬಾ ಜನ ಧೂಮಪಾನ ಮಾಡುತ್ತಿದ್ದು, ಈ ರಸ್ತೆಯಲ್ಲಿ ಮಹಿಳೆಯರು ಓಡಾಡುವುದು ಕಷ್ಟವಾಗಿರುತ್ತದೆ. ಆದ್ದರಿಂದ ಈ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಯಿತು. | Senior Health Inspector/Police inspector | Pending |
| 6 | ವಾರ್ಡ್ ವ್ಯಾಪ್ತಿಯಲ್ಲಿ ಒಟ್ಟು 25 SWM ಬ್ಲಾಕ್‌ಗಳಿದ್ದು, ಪ್ರತಿ ಬ್ಲಾಕ್‌ಗಳಿಗೂ 2 ಸ್ವಯಂ ಸೇವಕರು/ ಶುಚಿಮಿತ್ರರನ್ನು ಗುರುತಿಸಿರುವಂತೆ ಸೂಚಿಸಲಾಯಿತು. | Junior Health Inspector | Pending |
| | **ಕಾಮಗಾರಿ ಇಲಾಖೆ (Engineering)** | | |
| 1 | ಸುದ್ದಗುಂಟೆ ಪಾಳ್ಯ ಮುಖ್ಯರಸ್ತೆ ಹಾಗೂ ಶಾಂತಮ್ಮ ಬಡಾವಾಣೆಗಳಲ್ಲಿ ಮಳೆ ನೀರಿನ ಚರಂಡಿಗಳಲ್ಲಿ ಹೂಳು ತುಂಬಿದ್ದು, ಹೂಳನ್ನು ತೆರವುಗೊಳಿಸಲು ಕೋರಲಾಯಿತು. | Assistant Engineer- BBMP | ಚರಂಡಿಗಳಲ್ಲಿ ಹೂಳು ತುಂಬಿದ್ದು, ಈಗಾಗಲೇ ಸದರಿ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಹೂಳನ್ನು ತೆರವುಗೊಳಿಸಲಾಗುವುದು. **(Longtime)** |
| 2 | ಕಗ್ಗದಾಸಪುರ ಮರಗದಮ್ಮ ದೇವಸ್ಥಾನ ರಸ್ತೆಯಲ್ಲಿರುವ ಮಳೆ ನೀರಿನ ಚರಂಡಿಯಲ್ಲಿನ ಹೂಳನ್ನು ತೆರವುಗೊಳಿಸಲು ಕೋರಲಾಯಿತು. | Assistant Engineer- BBMP | Pending |
| 3 | ರಸ್ತೆ ಬದಿಯ ಪಾದಚಾರಿ ಮಾಗದ ಒತ್ತುವರಿ ತೆರವುಗೊಳಿಸಲು **'Footpath encroachment drive'** ಮಾಡುವಂತೆ ಸೂಚಿಸಲಾಯಿತು. | Assistant Engineer- BBMP | Pending |
| 4 | 6ನೇ ಅಡ್ಡರಸ್ತೆ ಕಗ್ಗದಾಸಪುರದಲ್ಲಿರುವ ಖಾಲಿ ನಿವೇಶನದಲ್ಲಿ ಡೆಬ್ರಿಸ್‌ನ್ನು ತೆರವುಗೊಳಿಸಲು ಕೋರಲಾಯಿತು. | Assistant Engineer- BBMP | ಪ್ರಗತಿಯಲ್ಲಿದೆ. |
| 5 | ವೇಮನ ರಸ್ತೆಯಲ್ಲಿ ಮಳೇ ನೀರಿನ ಚರಂಡಿ ಮೇಲೆ ಸ್ಲಾಬ್‌ನ್ನು ಹಾಕಲು ಕೋರಲಾಯಿತು. | Assistant Engineer- BBMP | Pending |
| 6 | ಎಲ್ಲಮ್ಮ ದೇವಸ್ಥಾನ ಪಕ್ಕ ಮನೆಯ ಮೇಲೆ ಮೊಬೈಲ್ ಟವರ್ ಅಳವಡಿಸಿದ್ದು, ಇದರಿಂದ ತುಂಬಾ ತೊಂದರೆ ಆಗುತ್ತಿದ್ದು, ಕೂಡಲೇ ಇದನ್ನು ತೆರವುಗೊಳಿಸಲು ಕೋರಲಾಯಿತು. | Assistant Engineer- BBMP | ನೋಟೀಸು ನೀಡಲಾಗಿದೆ. |
| 7 | ಸುದ್ದಗುಂಟೆ ಪಾಳ್ಯದಲ್ಲಿರುವ ಅಂಗನವಾಡಿ ಕೇಂದ್ರ ತುಂಬಾ ಶಿಥಿಲಗೊಂಡಿದ್ದು, ಇದನ್ನು ದುರಸ್ಥಿ ಪಡಿಸಲು ಕೋರಲಾಯಿತು. | Assistant Engineer- BBMP | Pending |
| 8 | ಕಗ್ಗದಾಸಪುರದ 7ನೇ 'ಎ' ಅಡ್ಡರಸ್ತೆಯ **Dead End** ಬಳಿ ರೈಲ್ವೇ ಹಳಿಗಳಿದ್ದು, ಪಕ್ಕದ ವಾರ್ಡ್‌ನಿಂದ ಸಾರ್ವಜನಿಕರು ಈ ರಸ್ತೆಯಲ್ಲಿ ಓಡಾಡುತ್ತಿದ್ದು, ರಾತ್ರಿವೇಳೆ ಸಾರ್ವಜನಿಕರಿಗೆ ಅಸುರಕ್ಷಿತವಾಗಿದ್ದು, ಸದರಿ **Dead End** ನಲ್ಲಿ ತಡೆಗೋಡೆ ನಿರ್ಮಿಸುವ ಕುರಿತು ಕ್ರಮ ಕೈಗೊಳ್ಳಲು ಕೋರಲಾಯಿತು. | Assistant Engineer- BBMP | Pending |
| | **ಬೀದಿ ದೀಪಗಳ ನಿರ್ವಹಣೆ (Street lights)** | | |
| 1 | ಕಗ್ಗದಾಸಪುರದ ಅನೇಕ ಬೀದಿಗಳಲ್ಲಿ ಬೀದಿ ದೀಪಗಳು ಸರಿಯಾಗಿ ಉರಿಯುತ್ತಿರುವುದಿಲ್ಲ ಎಂದು ದೂರಲಾಯಿತು. | Assistant Engineer-Street | |

Sgd

Scanned with CamScanner

| | | | |
|---|---|---|---|
| | ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿರುವ ಸೋಡಿಯಮ್ ಲೈಟ್‌ಗಳನ್ನು ದುರಸ್ಥಿಪಡಿಸಿ, ಸಮರ್ಪಕವಾಗಿ ನಿರ್ವಹಿಸಲು ಸೂಚಿಸಿದರು. | light | Pending |
| 2 | ಮಾರುತೀನಗರ ಅನೇಕ ಬೀದಿಗಳಲ್ಲಿ ಬೀದಿ ದೀಪಗಳು ಸರಿಯಾಗಿ ಉರಿಯುತ್ತಿರುವುದಿಲ್ಲ ಎಂದು ದೂರಲಾಯಿತು. | Assistant Engineer-Street light | ಪ್ರಗತಿಯಲ್ಲಿದೆ. |
| 3 | ಹಳೇ ಮದ್ರಾಸ್ ರಸ್ತೆಯಿಂದ ಸುದ್ದಗುಂಟೆ ಪಾಳ್ಯದವರೆಗಿನ ರಸ್ತೆಯಲ್ಲಿ ಒಂದೂ ಬೀದಿ ದೀಪ ಉರಿಯುತ್ತಿರುವುದಿಲ್ಲ ಎಂದು ದೂರಲಾಯಿತು. | Assistant Engineer-Street light | ಸೋಡಿಯಮ್ ಲೈಟ್‌ಗಳು ಉರಿಯುತ್ತಿದ್ದು, ಎಲ್.ಇ.ಡಿ ಲೈಟ್‌ಗಳ ಬದಲಾವಣೆ ಕಾರ್ಯ ಬಾಕಿ ಇರುತ್ತದೆ. |
| 4 | ವರ್ಸೊವಾ ಬಡಾವಣೆಯಲ್ಲಿನ ರಸ್ತೆಗಳಲ್ಲಿ ಬೀದಿ ದೀಪಗಳ ನಿರ್ವಹಣೆ ಸಮರ್ಪಕವಾಗಿರುವುದಿಲ್ಲ ಎಂದು ತಿಳಿಸಿದರು. | Assistant Engineer-Street light | Pending |
| 5 | ನಾಗವಾರ ಪಾಳ್ಯ ಮುಖ್ಯರಸ್ತೆ ಹಾಗೂ ಬಡಾವಣೆಯ ರಸ್ತೆಗಳಲ್ಲಿ ಬೀದಿ ದೀಪಗಳು ಉರಿಯುತ್ತಿರುವುದಿಲ್ಲವೆಂದು ತಿಳಿಸಿದರು | Assistant Engineer-Street light | Pending |
| 6 | ಬೀದಿ ದೀಪಗಳ ಕಂಬಗಳಿಗೆ "Automatic control" ಗಳನ್ನು ಅಳವಡಿಸಲು ಕೋರಲಾಯಿತು. | Assistant Engineer-Street light | Pending |
| 7 | ಅಟಲ್ ಬಿಹಾರಿ ವಾಜಪೇಯಿ ವಾಕಿಂಗ್ ಟ್ರಾಕ್‌ಲ್ಲಿ ಬೀದಿ ದೀಪಗಳು ಉರಿಯುತ್ತಿಲ್ಲವೆಂದು ದೂರಲಾಯಿತು. | Assistant Engineer-Street light | Pending |
| 8 | ವರ್ತೂರು ಮುಖ್ಯರಸ್ತೆಗಳಲ್ಲಿ ಬೀದಿ ದೀಪಗಳು ಕಾರ್ಯನಿರ್ವಹಿಸುತ್ತಿಲ್ಲವೆಂದು ದೂರಲಾಯಿತು. ಹಾಗೂ ಹಾಳಾಗಿರುವ ನಾಲ್ಕು ವಿದ್ಯುತ್ ಕಂಬಗಳನ್ನು ಪುನರ್‌ಸ್ಥಾಪಿಸಲು ಕೋರಲಾಯಿತು. | Assistant Engineer-Street light | Pending |
| 9 | ಹಳೇ ಮದ್ರಾಸ್ ರಸ್ತೆ ಹಾಗೂ ವರ್ತೂರು ರಸ್ತೆಯ ಜಂಕ್ಷನ್‌ನಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ **High masque** ನ್ನು ಅಳವಡಿಸಲು ಕೋರಲಾಯಿತು. | Assistant Engineer-Street light | **TRAFIC POLICE** ಇಲಾಖೆಯಿಂದ ಮನವಿ ಸಲ್ಲಿಸಿದ್ದು, ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. |
| 10 | ನೇತ್ರಾವತಿ ಬಡಾವಣೆಯಲ್ಲಿ ಬೀದಿ ದೀಪಗಳ ನಿರ್ವಹಣೆ ಸಮರ್ಪಕವಾಗಿಲ್ಲವೆಂದು ತಿಳಿಸಲಾಯಿತು. | Assistant Engineer-Street light | Pending |
| | **ಕಂದಾಯ ಇಲಾಖೆ (Revinue Department)** | | |
| 1 | ಘನತ್ಯಾಜ್ಯ ನಿರ್ವಹಣೆಯ ವಾಹನಗಳ **Transit Point**ಗಾಗಿ ಸ್ಥಳ ನಿಗಧಿಪಡಿಸಲು ಸೂಚಿಸಲಾಯಿತು. | Revinue Inspector | Pending |
| | **V. Road Infra** | | |
| 1 | ಕಗ್ಗದಾಸಪುರ ಮುಖ್ಯರಸ್ತೆಯಲ್ಲಿ M.K.Retail ಅಂಗಡಿಯಿಂದ 1ನೇ ಅಡ್ಡರಸ್ತೆ ಕಗ್ಗದಾಸಪುರ ರವರೆಗೆ ಒಂದು ಬದಿ ಮಳೆ ನೀರಿನ ಚರಂಡಿ ಇಲ್ಲದಿರುವುದರಿಂದ ಮಳೆಯಿಂದಾಗಿ ತುಂಬಾ ತೊಂದರೆಯಾಗುತ್ತಿದ್ದು, ಇದನ್ನು ನಿರ್ಮಿಸಲು ಕ್ರಮ ಕೈಗೊಳ್ಳಲು ಕೋರಲಾಯಿತು. | Assistant Engineer- Road Infra | ಮುಖ್ಯ ಅಭಿಯಂತರರು(ರಸ್ತೆ ಮೂಲಭೂತ ಸೌಕರ್ಯ) ರವರಿಗೆ ಪತ್ರ ಬರೆಯಲಾಗಿದೆ. |
| 2 | ಮಲ್ಲೇಶ್‌ಪಾಳ್ಯ ಹಾಗೂ ಕಗ್ಗದಾಸಪುರ ಮುಖ್ಯರಸ್ತೆಗಳಲ್ಲಿ ಹಲವು ಕಡೆ Slab ಗಳು ಮುರಿದು ಹೋಗಿದ್ದು, ಇವುಗಳನ್ನು ಬದಲಾಯಿಸಿ ಕೊಡಲು ಕೋರಲಾಯಿತು. | Assistant Engineer- Road Infra | Pending |
| 3 | ಹಳೇ ಮದ್ರಾಸ್ ಮುಖ್ಯರಸ್ತೆ, ಗೋಪಾಲನ್ ಮಾಲ್ ಹತ್ತಿರ ಇರುವ **Celestial greens** ಅಪಾರ್ಟ್‌ಮೆಂಟ್ ಮುಂದೆ | Assistant Engineer- SWD/ Road Infra | ಪ್ರಗತಿಯಲ್ಲಿದೆ. |

ವಿಶೇಷ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ)ಬಿಬಿಎಂ
ಹಾಗೂ ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ- 57 ಸಿ.ವಿ ರಾಮನ್‌ನಗರ

Scanned with CamScanner

| | | | |
|---|---|---|---|
| | ...ಚ್ಚಗೊಳಿಸಲು ಕೋರಲಾಯಿತು. | | |
| **ANIMAL HUSBANDARY** | | | |
| 1 | ಬಾಲಾಜಿ ಬಡಾವಣೆಯಲ್ಲಿ ಬೀದಿ ನಾಯಿಗಳಿಂದ ತುಂಬಾ ತೊಂದರೆಯಾಗುತ್ತಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಯಿತು. | **ANIMAL HUSBANDARY** | **Pending** |
| **ಕೆರೆಗಳ ಅಭಿವೃದ್ಧಿ (Lakes development)** | | | |
| 1 | ಕಗ್ಗದಾಸಪುರದ ಕೆರೆ ಪ್ರದೇಶದಲ್ಲಿ ಡೆಬ್ರಿಸ್ ಹಾಕಲಾಗುತ್ತಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಯಿತು. | **Assistant Engineer-Lakes** | ¥ÀvÀæ §gÉAiÀÄ¯ÁVzÉ. |
| **ಕಲ್ಯಾಣ ಇಲಾಖೆ (Welfare Department)** | | | |
| 1 | ಅರ್ಹ ಫಲಾನುಭವಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ವಿತರಿಸಲು ಕಡತವನ್ನು ಸಲ್ಲಿಸಲಾಗಿದ್ದು, ಇದುವರೆವಿಗೂ ವಿತರಣೆಯಾಗಿರುವುದಿಲ್ಲ. ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಯಿತು. | **Welfare Department** | **Pending** |
| **ಬೃಹತ್ ನೀರುಗಾಲುವೆ (SWD)** | | | |
| 1 | ಮಲ್ಲೇಶ್‌ಪಾಳ್ಯ 5ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆಯಲ್ಲಿರುವ ಬೃಹತ್ ನೀರುಗಾಲುವೆಯಲ್ಲಿ ಹೂಳನ್ನು ತೆರವುಗೊಳಿಸಲು ಕೋರಲಾಯಿತು. | **Assistant Engineer- SWD** | **Pending** |
| 2 | ವರ್ಸೋವಾ ಬಡಾವಣೆ ಹತ್ತಿರ ಇರುವ ಬೃಹತ್ ನೀರು ಗಾಲುವೆಯ ಸ್ವಲ್ಪಭಾಗ ಫೆನ್ಸಿಂಗ್ ಹಾಗೂ ಪೈಂಟಿಂಗ್ ಬಾಕಿ ಇದ್ದು, ಇದನ್ನು ಪೂರ್ಣಗೊಳಿಸುವಂತೆ ಕೋರಲಾಯಿತು. | **Assistant Engineer- SWD** | **Pending** |
| **II.BWSSB** | | | |
| 1 | 19ನೇ ಅಡ್ಡರಸ್ತೆ, ಕಗ್ಗದಾಸಪುರದಲ್ಲಿ ಕುಡಿಯುವ ನೀರಿನ ಸರಬರಾಜು ಸಮರ್ಪಕವಾಗಿಲ್ಲವೆಂದು ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಯಿತು. | **Assistant Engineer- BWSSB** | ಕಗ್ಗದಾಸಪುರಕ್ಕೆ ನೀರು ಸರಬರಾಜು ಕಡಿಮೆ ಇದ್ದು, ಕಗ್ಗದಾಸಪುರ ಮುಖ್ಯರಸ್ತೆಯಲ್ಲಿರುವ ರೈಲ್ವೇ ಗೇಟ್ ಹತ್ತಿರ ಲಿಂಕ್ ಕಾಮಗಾರಿ ಪ್ರಗತಿಯಲ್ಲಿದ್ದು, ಪೂರ್ಣಗೊಂಡ ನಂತರ ಸಮರ್ಪಕವಾಗಿ ನೀರು ಸರಬರಾಜು ಮಾಡಲಾಗುವುದು. **(Long term)** |
| 2 | ಕಗ್ಗದಾಸಪುರಕ್ಕೆ ನೀರು ಸರಬರಾಜು ಕಡಿಮೆ ಇದ್ದು, ಕಗ್ಗದಾಸಪುರ ಮುಖ್ಯರಸ್ತೆಯಲ್ಲಿರುವ ರೈಲ್ವೇ ಗೇಟ್ ಹತ್ತಿರ ಲಿಂಕ್ ಕಾಮಗಾರಿ ಪ್ರಗತಿಯಲ್ಲಿದ್ದು, ಇದರ ಬಗ್ಗೆ ಕ್ರಮ ವಹಿಸುವಂತೆ ಸೂಚಿಸಲಾಯಿತು. | **Assistant Engineer- BWSSB** | **Pending** |
| 3 | 6ನೇ 'ಜಿ'ಅಡ್ಡರಸ್ತೆ, ಕಗ್ಗದಾಸಪುರದಲ್ಲಿ ಅಪಾರ್ಟ್‌ಮೆಂಟ್‌ಗಳಿಗೆ ಕಾವೇರಿ ನೀರು ಸರಬರಾಜು ಆಗದೇ ಇದ್ದರೂ ಬಿಲ್‌ಗಳನ್ನು ಸಂಗ್ರಹಿಸಲಾಗುತ್ತಿದೆ ಎಂದು ತಿಳಿಸಿದರು. | **Assistant Engineer- BWSSB** | ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಪತ್ರ ಬರೆಯಲಾಗಿದೆ. |
| 4 | ಕಗ್ಗದಾಸಪುರದ 7ನೇ 'ಎ' ಅಡ್ಡರಸ್ತೆಯಲ್ಲಿ ಕುಡಿಯುವ ನೀರಿನ ಸರಬರಾಜು ಸಮರ್ಪಕವಾಗಿಲ್ಲವೆಂದು ತಿಳಿಸಲಾಯಿತು. | **Assistant Engineer- BWSSB** | **Pending** |
| **TRAFIC POLICE DEPARTMENT** | | | |
| 1 | ವಾರ್ಡ್‌ಗಳಲ್ಲಿನ ರಸ್ತೆಗಳಲ್ಲಿ ಬೀದಿ ದೀಪಗಳ ಹಾಗೂ ರಸ್ತೆಗುಂಡಿ ಬಗ್ಗೆ ಸರ್ವೆ ಮಾಡಲು ಸೂಚಿಸಲಾಯಿತು. | **TRAFIC POLICE** | **Pending** |
| 2 | 19ನೇ ಅಡ್ಡರಸ್ತೆಯಲ್ಲಿ ಅನಗತ್ಯ ವಾಹನಗಳನ್ನು ಪಾರ್ಕಿಂಗ್ ಮಾಡುತ್ತಿದ್ದು, ಇದರಿಂದ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಯಿತು. | **TRAFIC POLICE** | **Pending** |

ವಿಶೇಷ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ) ಬಿಬಿಎಂಪಿ
ಹಾಗೂ ನೋಡೆಲ್ ಅಧಿಕಾರಿಗಳು
ಕ್ಷೇತ್ರ ಸಂಖ್ಯೆ- 57 ಸಿ.ವಿ ರಾಮನ್‌ನಗರ

Scanned with CamScanner

| | | | |
|---|---|---|---|
| | ...ಣ್ಣನ ನಗರ ಬಸ್ ನಿಲ್ದಾಣದಲ್ಲಿ ನಿರ್ಮಿಸಿರುವ ತಿರುವು ಅವೈಜ್ಞಾನಿಕವಾಗಿದ್ದು, ಇದನ್ನು ಸರಿಪಡಿಸಿಕೊಡುವಂತೆ ಕೋರಲು ಪತ್ರ ಬರೆಯಲು ಸೂಚಿಸಲಾಯಿತು. | TRAFIC POLICE | Pending |
| 4 | ನಾಗವಾರ ಪಾಳ್ಯ ಮುಖ್ಯ ರಸ್ತೆಯಲ್ಲಿ ಅನಗತ್ಯ ವಾಹನಗಳನ್ನು ಪಾರ್ಕಿಂಗ್ ಮಾಡುತ್ತಿದ್ದು, ಇದರಿಂದ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಯಿತು. | TRAFIC POLICE | Pending |
| 5 | ಹಳೇ ಮದ್ರಾಸ್ ರಸ್ತೆ ಹಾಗೂ ವರ್ತೂರು ರಸ್ತೆಯ ಜಂಕ್ಷನ್‌ನಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ **High masque** ನ್ನು ಅಳವಡಿಸಲು ಕೋರಿ ಬಿ.ಬಿ.ಎಂ.ಪಿ ಬೀದಿ ದೀಪಗಳು ಇಲಾಖೆಗೆ ಪತ್ರ ಬರೆಯಲು ಕೋರಲಾಯಿತು. | TRAFIC POLICE | Pending |
| | **ಪೊಲೀಸ್ ಇಲಾಖೆ(ಕಾನೂನು ಮತ್ತು ಸುವ್ಯವಸ್ಥೆ)** | | |
| 1 | ಮಲ್ಲೇಶ್‌ಪಾಳ್ಯದಲ್ಲಿ ಪೊಲೀಸ್ ಬೀಟ್‌ಮಾಡಲು ಕೋರಲಾಯಿತು. | Police Department | Pending |

**ಸಭೆಯಲ್ಲಿ ಚರ್ಚಿಸಿದ ವಿಷಯಗಳು:-**

| ಕ್ರ. ಸಂ | ಮಾಹಿತಿ | ಕ್ರಮ ವಹಿಸಬೇಕಾಗಿರುವ ಅಧಿಕಾರಿ |
|---|---|---|
| I | **BBMP** | |
| | **ಘನತ್ಯಾಜ್ಯ ನಿರ್ವಹಣೆ (SWM)/ ಆರೋಗ್ಯ ಇಲಾಖೆ Health Department** | |
| 1 | ವರ್ಸೋವಾ ಲೇಔಟ್ ಹಿಂಬದಿಯಲ್ಲಿರುವ ಖಾಲಿ ಜಾಗದಲ್ಲಿ ಅನಧಿಕೃತ ಉದ್ದಿಮೆಗಳು ನಡೆಸುತ್ತಿದ್ದು, ಇದರಿಂದ ಶಬ್ಧ ಮಾಲಿನ್ಯ ಉಂಟಾಗುತ್ತಿದೆ ಹಾಗೂ ಕಾರ್ಮಿಕರ ಶೆಡ್‌ಗಳಿದ್ದು, ಸ್ವಚ್ಚತೆ ಕಾಪಾಡದೇ ತೊಂದರೆ ಉಂಟಾಗುತ್ತಿದೆ ಎಂದು ತಿಳಿಸಲಾಯಿತು. | Senior Health Inspector |
| 2 | ಮಾರುತಿನಗರದ 7ನೇ ಮುಖ್ಯರಸ್ತೆಯಲ್ಲಿ ಐ.ಒ.ಬಿ ಬ್ಯಾಂಕ್ ಹತ್ತಿರ ಇರುವ ಡ್ರೈನ್‌ನಲ್ಲಿ ಕಸ ತುಂಬಿಕೊಂಡಿದ್ದು, ಇದರ ಬಗ್ಗೆ ಕ್ರಮಕೈಗೊಳ್ಳಲು ಕೋರಲಾಯಿತು. | Junior Health Inspector |
| | **Trafic Engineering cell** | |
| 1 | ಹಳೇಮದ್ರಾಸ್ ರಸ್ತೆಯಲ್ಲಿ ಗೋಪಾಲನ್ ಮಲ್ ಹತ್ತಿರ ದಿಂದ ಎನ್.ಜಿ.ಇ.ಎಫ್ ಸಿಗ್ನಲ್‌ರವರೆಗೂ ಅಳವಡಿಸಿರುವ ಮೀಡಿಯನ್‌ಗಳನ್ನು **Fix** ಮಾಡದೇ ಇರುವ ಕಾರಣ ಸಂಚಾರಕ್ಕೆ ಅಡ್ಡಿ ಉಂಟಾಗುತ್ತಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಿದರು. | AEE Trafic Engineering cell |
| | **BWSSB** | |
| 1 | ವರ್ಸೋವಾ ಲೇಔಟ್ ಮುಖಾಂತರ ಸೀವೇಜ್ ನೀರನ್ನು ಕಗ್ಗದಾಸಪುರ ಕೆರೆಗೆ ಹರಿಯಬಿಡುತ್ತಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಯಿತು. | Assistant Engineer-BWSSB |
| 2 | ಸುದ್ದಗುಂಟೆ ಪಾಳ್ಯದ ಮಹೇಶ್ವರಮ್ಮ ದೇವಸ್ಥಾನದ ಹತ್ತಿರ ಇರುವ ಬೋರ್‌ವೆಲ್‌ನ ಮೋಟರ್ ದುರಸ್ಥಿಗೊಳಿಸಿ ನೀರು ಬಳಕೆಯಾಗುವಂತೆ ಕ್ರಮ ವಹಿಸಲು ಕೋರಲಾಯಿತು. | Assistant Engineer BWSSB |
| 3 | ಸುದ್ದಗುಂಟೆ ಪಾಳ್ಯದ 8ನೇ ಮುಖ್ಯರಸ್ತೆಯಲ್ಲಿ ಮ್ಯಾನ್‌ಹೋಲ್ ಬ್ಲಾಕ್ ಆಗಿ ನೀರು ರಸ್ತೆಯಲ್ಲಿ ಹರಿಯುತ್ತಿರುತ್ತದೆ. | Assistant Engineer BWSSB |
| 4 | ಅಬ್ಬಯ್ಯಪ್ಪ ಲೇಔಟ್ ಗಣೇಶ ದೇವಸ್ಥಾನ ರಸ್ತೆಯಲ್ಲಿ ಕಾವೇರಿ ನೀರಿನ ಪೈಪ್ ಅಳವಡಿಕೆಗಾಗಿ ಅಗೆದ ಮಣ್ಣನ್ನು ತೆರವುಗೊಳಿಸಿರುವುದಿಲ್ಲ. | Assistant Engineer BWSSB |
| 5 | ಬಾಲಾಜಿ ಬಡಾವಣೆಯ 29ನೇ ಎ ಮತ್ತು ಬಿ ಕ್ರಾಸ್‌ಗಳಲ್ಲಿ ಮಲೀನಗೊಂಡಿರುವ ಕುಡಿಯುವ ನೀರು ಸರಬರಾಜಾಗುತ್ತಿದ್ದು, ಇದರ ಬಗ್ಗೆ ತುರ್ತಾಗಿ ಕ್ರಮ ವಹಿಸಲು ಸೂಚಿಸಲಾಯಿತು. | Assistant Engineer BWSSB |
| | **POLICE DEPARTMENT** | |
| 1 | ಕಗ್ಗದಾಸಪುರ ಕೆರೆಯ ಸುತ್ತ-ಮುತ್ತಲಿನ ಪ್ರದೇಶದಲ್ಲಿ ಅನಧಿಕೃತ ಚಟುವಟಿಕೆಗಳು ನಡೆಯುತ್ತಿದ್ದು, ಪೊಲೀಸ್ ಬೀಟ್ ಮಾಡಲು ಕೋರಲಾಯಿತು. | POLICE DEPARTMENT |

Scanned with CamScanner

| | | |
|---|---|---|
| 2 | ಸುದ್ದಗುಂಟೆ ಪಾಳ್ಯ ಗಣೇಶ ದೇವಸ್ಥಾನ ರಸ್ತೆ ಹಾಗೂ ರತ್ನ ಸ್ಟೋರ್ ರಸ್ತೆಯಲ್ಲಿ ಕಳ್ಳತನ ಜಾಸ್ತಿಯಾಗಿದ್ದು, ರಾತ್ರಿವೇಳೆಯಲ್ಲಿ ಓಡಾಡಲು ಸಮಸ್ಯೆಯಾಗುತ್ತಿದ್ದು, ಇದನ್ನು ತಡೆಗಟ್ಟಲು ಪೊಲೀಸ್ ಬೀಟ್ ಮಾಡಲು ಕೋರಲಾಯಿತು. | POLICE DEPARTMENT |

ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ವಹಿಸಿ, ಕಾರ್ಯದರ್ಶಿ ವಾರ್ಡ್ ಸಮಿತಿ ಇವರಿಗೆ ಅನುಪಾಲನಾ ವರದಿಯನ್ನು ನೀಡುವುದು.

ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ57-ಸಿ.ವಿ.ರಾಮನ್‌ನಗರ

ಅಧ್ಯಕ್ಷರು
ವಿಶೇಷ ಆಯುಕ್ತರು(ಘನತ್ಯಾಜ್ಯ ನಿರ್ವಹಣೆ)
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ57-ಸಿ.ವಿ.ರಾಮನ್‌ನಗರ